ಹಮ್ಮಿಕೊಳ್ಳಲಾಗಿದ್ದು ಅವುಗಳಿಗೆ ಅನುಮೋದನೆ ಪಡೆಯಲಾಗಿದೆ ಹಾಗೂ ಈ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಇ) ಸದರಿ ಕಾಮಗಾರಿಗಳಿಗೆ ಈ ಕೆಳಕಂಡ ಶೀರ್ಷಿಕೆ ಅಡಿ ಹಣ ಬಿಡುಗಡೆ ಮಾಡಲಾಗಿದೆ.

| ಯೋಜನೆ | ಮೊತ್ತ (ರೂ. ಲಕ್ಷಗಳಲ್ಲಿ) |
|---|---|
| ಲೆಕ್ಕ ಶೀರ್ಷಿಕೆ–4215 | 40.45 |
| ಟಾಸ್ಕ್ ಫೋರ್ಸ್ | 15.612 |
| ಬರ ಪರಿಹಾರ ಕಾಮಗಾರಿ | 13.00 |
| ಒಟ್ಟು | 69.062 |

**463 ಡಾ: ಮಹಾದೇವಪ್ಪ ಹೆಚ್. ಸಿ (ಟಿ. ನರಸೀಪುರ) :** ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಸುಮಾರು ಮತ ಕ್ಷೇತ್ರಗಳಿಗೆ ಕಳೆದ ಶೈಕ್ಷಣಿಕ ವರ್ಷದಲ್ಲಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಿರುವುದು ನಿಜವೇ;

ಆ) ಹಾಗಿದ್ದಲ್ಲಿ ಟಿ. ನರಸೀಪುರ ಹಾಗೂ ನಂಜನಗೂಡು ತಾಲ್ಲೂಕಿನ ಕೆಲವು ಗ್ರಾಮಗಳಿಗೆ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡದಿರಲು ಕಾರಣಗಳೇನು;

ಇ) ಈಗಾಗಲೇ ಮಂಜೂರಾಗಿರುವ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಯಾವ ಮಾನದಂಡದ ಮೇಲೆ ಮಂಜೂರು ಮಾಡಲಾಗಿದೆ (ಸಮಗ್ರ ಮಾಹಿತಿಯನ್ನು ಒದಗಿಸುವುದು)?

**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು :**

ಅ) ಹೌದು

ಆ) ಸರ್ಕಾರಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳ ಮಂಜೂರಾತಿಯು ನಿರಂತರ ಪ್ರಕ್ರಿಯೆಯಾಗಿದ್ದು, ಪ್ರತಿ ವರ್ಷ ಆಯವ್ಯಯದಲ್ಲಿನ ಹಣಕಾಸಿನ ಲಭ್ಯತೆ, ಶೈಕ್ಷಣಿಕ ಅಗತ್ಯತೆಯನ್ನು ಪರಿಗಣಿಸಿ ಅಗತ್ಯವಿರುವ ಕಡೆ ಮಂಜೂರು ಮಾಡಲಾಗುತ್ತದೆ. 2006–07ನೇ ಸಾಲಿನಲ್ಲಿ ನಂಜನಗೂಡು ತಾಲ್ಲೂಕಿಗೆ ಹೆಮ್ಮರಗಾಲದಲ್ಲಿ 1 ಸರ್ಕಾರಿ ಪದವಿ ಪೂರ್ವ ಕಾಲೇಜು, ಹರದನಹಳ್ಳಿ ಕಳಲೆ ಮತ್ತು ಎಡತಲೆಯಲ್ಲಿ 3 ಸರ್ಕಾರಿ

ಪ್ರೌಢಶಾಲೆಗಳು ಹಾಗೂ ಟಿ. ನರಸೀಪುರ ತಾಲ್ಲೂಕಿಗೆ ಬದ್ದೂರಿನಲ್ಲಿ ಬಾಲಕಿಯರಿಗಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜು ಮತ್ತು ಮೆಣಸಿನಕ್ಯಾತನಹಳ್ಳಿಯಲ್ಲಿ 1 ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಹಾಗೂ ಮಾವಿನಹಳ್ಳಿಯಲ್ಲಿ 1 ಸರ್ಕಾರಿಪ್ರೌಢಶಾಲೆ ಯನ್ನು ಮಂಜೂರು ಮಾಡಲಾಗಿದೆ.

ಇ) ಅ) ಪ್ರೌಢಶಾಲೆ ಮಂಜೂರಾತಿಗೆ ಇರುವ ಮಾನದಂಡಗಳು

1) 0.5 ಕಿ.ಮೀ. ಅಂತರದಲ್ಲಿ ಯಾವುದೇ ಸರ್ಕಾರಿ ಅಥವಾ ಖಾಸಗಿ ಅನುದಾನಿತ ಪ್ರೌಢಶಾಲೆ ಇರಬಾರದು

2) ಕನಿಷ್ಟ 50 ಮಕ್ಕಳು 8ನೇ ತರಗತಿಗೆ ದಾಖಲಾಗುವ ಸಾಧ್ಯತೆ ಇರಬೇಕು.

3) ಪೂರಕ ಪ್ರಾಥಮಿಕ ಶಾಲೆಗಳಿರಬೇಕು.

4) ಶಾಲೆಗೆ ಬೇಕಾದ ಮೂಲಭೂತ ಸೌಲಭ್ಯಗಳನ್ನು ಹಾಗೂ ಕಟ್ಟಡವನ್ನು ಒದಗಿಸುವ ಸಾಧ್ಯತೆ ಇರಬೇಕು

5) ಡಾ; ನಂಜುಂಡಪ್ಪ ವರದಿಯಂತೆ ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಿಗೆ ಪ್ರಾಧಾನ್ಯತೆ ನೀಡಲಾಗುತ್ತದೆ.

ಆ) ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಇರುವ ಮಾನದಂಡಗಳು.

1) 05. ಕಿ.ಮೀ ದೂರದಲ್ಲಿ ಯಾವುದೇ ಸರ್ಕಾರಿ ಅಥವಾ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜು ಇರಬಾರದು.

2) ಈಗಾಗಲೇ ಸರ್ಕಾರಿ ಅಥವಾ ಅನುದಾನಿತ ಸರ್ಕಾರಿ ಪದವಿ ಪೂರ್ವ ಕಾಲೇಜು ಇದ್ದಲ್ಲಿ ಇದರಲ್ಲಿ ವಿದ್ಯಾರ್ಥಿಗಳ ದಾಖಲಾತಿ ಗರಿಷ್ಟ ಮಿತಿಯಲ್ಲಿರತಕ್ಕದ್ದು.

3) ಸುತ್ತಮುತ್ತಲಿನ 10. ಕಿ.ಮೀ,. ದೂರದಲ್ಲಿ ಪೂರಕ ಪ್ರೌಢಶಾಲೆಗಳು ಹಾಗೂ ಇದರಲ್ಲಿರುವ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಯನ್ನು ಹಾಗೂ ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶವನ್ನು ಪರಿಗಣಿಸಲಾಗುವುದು.

4) ಅಗತ್ಯ ಮೂಲಭೂತ ಸೌಲಭ್ಯಗಳಾದ ಕಟ್ಟಡ ತರಗತಿ ಕೊಠಡಿಗಳು, ಪ್ರಯೋಗಾಲಯ, ಗ್ರಂಥಾಲಯ, ಕುಡಿಯುವ ನೀರಿನ ಸೌಲಭ್ಯ ಶೌಚಾಲಯ, ಇತ್ಯಾದಿಗಳನ್ನು ಪರಿಗಣಿಸಲಾಗುವುದು.

5) ಡಾ: ನಂಜುಂಡಪ್ಪ ವರದಿಯಂತೆ ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಿಗೆ ಪ್ರಾಧಾನ್ಯತೆ ನೀಡಲಾಗುತ್ತದೆ.